**All India Radio: Bangalore**
**National Bulletin In Kannada**
**04.07.2026  19.35 hrs**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

೧. ಗುಜರಾತ್‌ನ ಸಾನಂದ್‌ನಲ್ಲಿ ೭ ಸಾವಿರದ ೫೦೦ ಕೋಟಿ ರೂಪಾಯಿ ಹೂಡಿಕೆಯ ಸೆಮಿಕಂಡಕ್ಟರ್ ಜೋಡಣಾ ಮತ್ತು ಪರೀಕ್ಷಾ ಘಟಕ ಉದ್ಘಾಟಿಸಿದ ಪ್ರಧಾನಿ ನರೇಂದ್ರ ಮೋದಿ

೨. ಇದೇ ೨೦ ರಿಂದ ಸಂಸತ್ತಿನ ಮುಂಗಾರು ಅಧಿವೇಶನ ಆರಂಭ; ಕೇಂದ್ರ ಸಚಿವ ಕಿರಣ್ ರಿಜಿಜು ಮಾಹಿತಿ

೩. ಭಾರತದ ರಕ್ಷಣಾ ರಫ್ತು ದಾಖಲೆಯ ರೂಪಾಯಿ ೩೮ ಸಾವಿರ ಕೋಟಿಗೆ ಏರಿಕೆ- ರಕ್ಷಣಾ ಸಚಿವ ರಾಜನಾಥ್ ಸಿಂಗ್

೪. ಕಾಂಗೋದಲ್ಲಿ ವಿಶ್ವಸಂಸ್ಥೆ ಶಾಂತಿಪಾಲನಾ ಪಡೆಯಲ್ಲಿ ಸೇವೆ ಸಲ್ಲಿಸುತ್ತಿರುವ ೬೫೧ ಭಾರತೀಯ ಯೋಧರಿಗೆ ಪ್ರತಿಷ್ಠಿತ 'ವಿಶ್ವಸಂಸ್ಥೆ ಪದಕ' ಗೌರವ

೫. ಭಾರತ-ಇಂಗ್ಲೆಂಡ್ ಅಂತಾರಾಷ್ಟ್ರೀಯ ಟಿ-೨೦ ಕ್ರಿಕೆಟ್ ಪಂದ್ಯ; ಅತಿ ಕಿರಿಯ ಆಟಗಾರನಾಗಿ ವೈಭವ್ ಸೂರ್ಯವಂಶಿ ಪದಾರ್ಪಣೆ

**<>><><*><><<>**

ಭಾರತದ ಸೆಮಿಕಂಡಕ್ಟರ್ ಯೋಜನೆ ಪ್ರಮುಖ ಉತ್ತೇಜನ ನೀಡುವ ದಿಸೆಯಲ್ಲಿ ಗುಜರಾತ್‌ನ ಸಾನಂದ್‌ನಲ್ಲಿಂದು ಪ್ರಧಾನಿ ನರೇಂದ್ರ ಮೋದಿ ೭ ಸಾವಿರದ ೫೦೦ ಕೋಟಿ ರೂಪಾಯಿ ಒಟ್ಟು ಹೂಡಿಕೆಯಲ್ಲಿ ಅಭಿವೃದ್ಧಿಪಡಿಸಲಾಗಿರುವ ಸಿಜಿ ಸೆಮಿ ಸಂಸ್ಥೆಯ ಹೊರಗುತ್ತಿಗೆ ಸೆಮಿಕಂಡಕ್ಟರ್ ಜೋಡಣಾ ಮತ್ತು ಪರೀಕ್ಷಾ ಘಟಕವನ್ನು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಧಾನಿ, ದೇಶದ ಮೂರನೇ ಸೆಮಿ ಕಂಡಕ್ಟರ್ ಸ್ಥಾವರವಾಗಿರುವ ಈ ಘಟಕಕ್ಕೆ ತಾವು ೨೦೨೪ರಲ್ಲಿ ಶಂಕುಸ್ಥಾಪನೆ ನೆರವೇರಿಸಿದ್ದು, ೨೦೨೫ರ ಆಗಸ್ಟ್‌ನಲ್ಲಿ ಚಿಪ್‌ಗಳ ಪರೀಕ್ಷೆ ಆರಂಭವಾಗಿತ್ತು ಎಂದು ಸ್ಮರಿಸಿದರು. ಭಾರತವು ಇಂದು 'ಡಿಸೈನ್ ಇನ್ ಇಂಡಿಯಾ, 'ಮೇಕ್ ಇನ್ ಇಂಡಿಯಾ' ಮಂತ್ರದೊಂದಿಗೆ ಮುನ್ನಡೆಯುತ್ತಿದೆ ಎಂದು ಹರ್ಷ ವ್ಯಕ್ತಪಡಿಸಿದರು. ಭಾರತ, ಜಪಾನ್ ಮತ್ತು ಥೈಲ್ಯಾಂಡ್ ದೇಶಗಳ ಜಂಟಿ ಸಹಭಾಗಿತ್ವದ ಈ ಘಟಕವು, ಆರಂಭದಲ್ಲಿ ಪ್ರತಿ ವರ್ಷ ೨೦ ಕೋಟಿ ಚಿಪ್‌ಗಳನ್ನು ಉತ್ಪಾದಿಸಲಿದ್ದು, ಮುಂದೆ ವಾರ್ಷಿಕ ೫೦೦ ಕೋಟಿ ಚಿಪ್ ತಯಾರಿಸುವ ಗುರಿ ಹೊಂದಿದೆ ಎಂದು ಪ್ರಧಾನಿ ತಿಳಿಸಿದರು.

**<>><><*><><<>**

ರಾಜಸ್ಥಾನದ ಪಚಪಾದ್ರಾದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಂದು ೧.೦೫ ಲಕ್ಷ ಕೋಟಿ ರೂಪಾಯಿಗಳಿಗೂ ಅಧಿಕ ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ನೆರವೇರಿಸಿದರು. ಇದರ ಜೊತೆಗೆ ಅವರು, ಅತ್ಯಾಧುನಿಕ ಗ್ರೀನ್ ಫೀಲ್ಡ್ ತೈಲ ಶುದ್ಧೀಕರಣ ಮತ್ತು ಪೆಟ್ರೋ ಕೆಮಿಕಲ್ ಸಂಕೀರ್ಣವನ್ನು ದೇಶಕ್ಕೆ ಸಮರ್ಪಿಸಿದರು. ಬಳಿಕ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ, ಪಶ್ಚಿಮ ಸಂಘರ್ಷದಿಂದಾಗಿ ೨೧ನೇ ಶತಮಾನದ ಅತಿದೊಡ್ಡ ಜಾಗತಿಕ ಇಂಧನ ಬಿಕ್ಕಟ್ಟು ಎದುರಾಗಿದ್ದರೂ ಭಾರತ ತನ್ನ ಸಮಯೋಚಿತ ನಿರ್ಧಾರಗಳು, ಪರಿಣಾಮಕಾರಿ ಕಾರ್ಯತಂತ್ರ ಮತ್ತು ಸಕ್ರಿಯ ರಾಜತಾಂತ್ರಿಕತೆಯ ಮೂಲಕ ಈ ಸವಾಲನ್ನು ಯಶಸ್ವಿಯಾಗಿ ಮೆಟ್ಟಿನಿಂತು ಬಲಿಷ್ಠವಾಗಿ ಹೊರಹೊಮ್ಮಿದೆ ಎಂದು ತಿಳಿಸಿದರು. ಬಿಕ್ಕಟ್ಟಿನ ಸಂದರ್ಭದಲ್ಲಿ ಮಿತ್ರ ರಾಷ್ಟ್ರಗಳೊಂದಿಗಿನ ಸದೃಢ ರಾಜತಾಂತ್ರಿಕ ಬಾಂಧವ್ಯ ಪ್ರಮುಖ ಪಾತ್ರವಹಿಸಿದೆ. ಭಾರತವು ತನ್ನ ಇಂಧನ ಆಮದು ಮೂಲಗಳನ್ನು ೨೫ ರಿಂದ ಸುಮಾರು ೪೦ ದೇಶಗಳಿಗೆ ವಿಸ್ತರಿಸುವ ಮೂಲಕ ನಾಗರಿಕರ ಹಿತಾಸಕ್ತಿಗೆ ಆದ್ಯತೆ ನೀಡಿದೆ. ಪ್ರಸ್ತುತ ಭಾರತ, ವಿಶ್ವದ ನಾಲ್ಕನೇ ಅತಿದೊಡ್ಡ ತೈಲ ಶುದ್ಧೀಕರಣ ರಾಷ್ಟ್ರವಾಗಿ ಹೊರಹೊಮ್ಮಿದೆ ಎಂದರು.

**<>><><*><><<>**

ಸಂಸತ್ತಿನ ಮುಂಗಾರು ಅಧಿವೇಶನವು ಈ ತಿಂಗಳ ೨೦ ರಿಂದ ಆರಂಭವಾಗಲಿದ್ದು, ಆಗಸ್ಟ್ ೧೩ ರವರೆಗೆ ಮುಂದುವರಿಯಲಿದೆ. ಜುಲೈ ೨೦ ರಿಂದ ಸಂಸತ್ತಿನ ಮುಂಗಾರು ಅಧಿವೇಶನವನ್ನು ಕರೆಯುವ ಸರ್ಕಾರದ ಪ್ರಸ್ತಾಪಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅನುಮೋದನೆ ನೀಡಿದ್ದಾರೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಇಂದು ಮಾಹಿತಿ ನೀಡಿದ್ದಾರೆ. ಈ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಸಚಿವರು ಪ್ರಕಟಣೆ

ಹೊರಡಿಸಿದ್ದು, ಮುಂಬರುವ ಈ ಅಧಿವೇಶನವು ರಾಷ್ಟ್ರೀಯ ಪ್ರಾಮುಖ್ಯತೆಯ ವಿವಿಧ ಪ್ರಮುಖ ವಿಷಯಗಳ ಕುರಿತು ಅರ್ಥಪೂರ್ಣ ಸಂವಾದ, ಸುದೀರ್ಘ ಚರ್ಚೆ ಹಾಗೂ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಗಮನಹರಿಸಲಿದೆ ಎಂದು ಸಚಿವ ಕಿರಣ್ ರಿಜಿಜು ತಿಳಿಸಿದ್ದಾರೆ.

<>><><*><><<>

ದೇಶದ ರಕ್ಷಣಾ ರಫ್ತು ಸಾರ್ವಕಾಲಿಕ ದಾಖಲೆಯಾದ ೩೮ ಸಾವಿರ ಕೋಟಿ ರೂಪಾಯಿಗಳನ್ನು ದಾಟಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ತಿಳಿಸಿದ್ದಾರೆ. ನವದೆಹಲಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ೨೦೧೩-೧೪ರಲ್ಲಿ ಕೇವಲ ೬೮೬ ಕೋಟಿ ರೂಪಾಯಿಗಳಷ್ಟಿದ್ದ ರಕ್ಷಣಾ ರಫ್ತು ಪ್ರಸ್ತುತ ಸುಮಾರು ೫೭ ಪಟ್ಟು ವೃದ್ಧಿಸಿದೆ. ಇದು 'ಮೇಕ್ ಇನ್ ಇಂಡಿಯಾ' ರಕ್ಷಣಾ ವೇದಿಕೆಗಳ ಮೇಲಿರುವ ಜಾಗತಿಕ ವಿಶ್ವಾಸವನ್ನು ಪ್ರದರ್ಶಿಸುತ್ತದೆ ಎಂದು ತಿಳಿಸಿದರು. ದೇಶದ ವಾರ್ಷಿಕ ರಕ್ಷಣಾ ಉತ್ಪಾದನೆಯೂ ಸಹ ೨೦೨೫-೨೬ರ ಆರ್ಥಿಕ ವರ್ಷದಲ್ಲಿ ೧.೭೮ ಲಕ್ಷ ಕೋಟಿ ರೂಪಾಯಿಗಳ ಸಾರ್ವಕಾಲಿಕ ಗರಿಷ್ಠ ಮಟ್ಟವನ್ನು ತಲುಪಿದ್ದು, ಇದು ೨೦೧೪-೧೫ರ ಅವಧಿಗೆ ಹೋಲಿಸಿದರೆ ಮೂರು ಪಟ್ಟು ಹೆಚ್ಚಾಗಿದೆ ಎಂದು ಸಚಿವರು ವಿವರಿಸಿದರು. 'ಮೇಕ್ ಇನ್ ಇಂಡಿಯಾ' ಉಪಕ್ರಮದ ಯಶಸ್ಸನ್ನು ಒತ್ತಿ ಹೇಳಿದ ಅವರು, ಮೊಬೈಲ್ ಫೋನ್ ಉತ್ಪಾದನೆ, ಆಟೋಮೊಬೈಲ್ ರಫ್ತು, ಸ್ವದೇಶಿ ರೈಲ್ವೆ ಇಂಜಿನ್‌ಗಳ ತಯಾರಿಕೆ ಮತ್ತು ಡಿಜಿಟಲ್ ಮೂಲಸೌಕರ್ಯ ವಲಯಗಳಲ್ಲಿ ದೇಶವು ಸಾಧಿಸಿರುವ ಬೃಹತ್ ಪ್ರಗತಿಯನ್ನು ಉಲ್ಲೇಖಿಸಿದರು.

<>><><*><><<>

ದೇಶಕ್ಕೆ ಆಮದಾಗುವ ವಿದೇಶಿ ಆಟಿಕೆಗಳ ಪ್ರಮಾಣದಲ್ಲಿ ಗಣನೀಯ ಕುಸಿತ ಕಂಡುಬಂದಿದ್ದು, ಪ್ರಸ್ತುತ ದೇಶೀಯ ಆಟಿಕೆ ಮಾರುಕಟ್ಟೆಯ ಬಹುಪಾಲು ಬೇಡಿಕೆಯನ್ನು 'ಮೇಡ್ ಇನ್ ಇಂಡಿಯಾ' ಉತ್ಪನ್ನಗಳೇ ಪೂರೈಸುತ್ತಿವೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ತಿಳಿಸಿದ್ದಾರೆ. ನವದೆಹಲಿಯಲ್ಲಿ ಆಯೋಜಿಸಲಾಗಿರುವ ೧೭ನೇ 'ಟಾಯ್ ಬಿಜ್ ಇಂಟರ್ನ್ಯಾಷನಲ್ ಬಿ೨ಬಿ ಎಕ್ಸ್‌ಪೋ'ವನ್ನು ಉದ್ದೇಶಿಸಿ ಮಾತನಾಡಿದ ಅವರು, ಜಾಗತಿಕ ಆಟಿಕೆ ಉದ್ಯಮದ ಮೌಲ್ಯವು ಸುಮಾರು ೧೨೦ ಬಿಲಿಯನ್ ಡಾಲರ್‌ಗಳಷ್ಟಿದ್ದರೂ, ಅದರಲ್ಲಿ ಭಾರತದ ಪಾಲು ಕೇವಲ ಶೇಕಡಾ ೦.೨ ರಿಂದ ೦.೩ ರಷ್ಟಿದೆ. ಹೀಗಾಗಿ ಈ ವಲಯದಲ್ಲಿ ದೇಶಕ್ಕೆ ವಿಸ್ತರಣೆಯಾಗಲು ಅಪಾರ ಅವಕಾಶಗಳು ಮತ್ತು ಸಾಮರ್ಥ್ಯಗಳಿವೆ ಎಂದರು. ದೇಶದ ಆಟಿಕೆ ತಯಾರಕರು ಸ್ವಾವಲಂಬನೆ ಸಾಧಿಸುವ ಮೂಲಕ ರಾಷ್ಟ್ರ ನಿರ್ಮಾಣಕ್ಕೆ ಗಣನೀಯ ಕೊಡುಗೆ ನೀಡುತ್ತಿದ್ದಾರೆ ಎಂದು ಸಚಿವರು ಶ್ಲಾಘಿಸಿದರು.

<>><><*><><<>

ಜಾಗತಿಕ ಶಾಂತಿಪಾಲನಾ ಕಾರ್ಯಾಚರಣೆಗಳಲ್ಲಿ ಭಾರತದ ದೀರ್ಘಕಾಲೀನ ಮತ್ತು ಶ್ಲಾಘನೀಯ ಕೊಡುಗೆಗೆ ಮತ್ತೊಂದು ಪ್ರಮುಖ ಮನ್ನಣೆ ಲಭಿಸಿದೆ. ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೋದ ಸಾಕೆನಲ್ಲಿರುವ ಖಾಯಂ ಕಾರ್ಯಾಚರಣೆ ನೆಲೆಯಲ್ಲಿ ನಡೆದ ಪದಕ ಪ್ರದಾನ ಪೆರೇಡ್‌ನಲ್ಲಿ, ವಿಶ್ವಸಂಸ್ಥೆಯಡಿ ಸೇವೆ ಸಲ್ಲಿಸುತ್ತಿರುವ ಭಾರತೀಯ ಭೂಸೇನೆಯ ೬೫೧ ಯೋಧರಿಗೆ ಪ್ರತಿಷ್ಠಿತ 'ವಿಶ್ವಸಂಸ್ಥೆ ಪದಕ' ನೀಡಿ ಗೌರವಿಸಲಾಗಿದೆ. ವಿಶ್ವಸಂಸ್ಥೆಯ ಶಾಂತಿಪಾಲನಾ ಕಾರ್ಯಾಚರಣೆಯಡಿಯಲ್ಲಿ ಭಾರತೀಯ ಪಡೆಯ ವೃತ್ತಿಪರತೆ, ಕಾರ್ಯಾಚರಣೆಯ ಉತ್ಕೃಷ್ಟತೆ ಮತ್ತು ಸಮರ್ಪಿತ ಸೇವೆಯನ್ನು ಶ್ಲಾಘಿಸಿ ನಿನ್ನೆ ನಡೆದ ವಿಶೇಷ ಸಮಾರಂಭದಲ್ಲಿ ಈ ಪದಕಗಳನ್ನು ಪ್ರದಾನ ಮಾಡಲಾಯಿತು. ವಿದೇಶಿ ನೆಲದಲ್ಲಿ ಶಾಂತಿ ಸ್ಥಾಪನೆಗಾಗಿ ಭಾರತೀಯ ಸೈನಿಕರು ತೋರುತ್ತಿರುವ ಅಪ್ರತಿಮ ದಕ್ಷತೆಗೆ ಈ ಗೌರವ ಸಾಕ್ಷಿಯಾಗಿದೆ.

<>><><*><><<>

ದೇಶದಲ್ಲಿ ಎಥೆನಾಲ್ ಉತ್ಪಾದನೆಯ ಮೂಲಗಳನ್ನು ವೈವಿಧ್ಯಗೊಳಿಸಿರುವುದು ಕಚ್ಚಾ ತೈಲ ಆಮದಿನ ಮೇಲಿನ ಅವಲಂಬನೆಯನ್ನು ಗಣನೀಯವಾಗಿ ಕಡಿಮೆ ಮಾಡಿದೆ ಎಂದು ಎಂಜಿನಿಯರ್ಸ್ ಇಂಡಿಯಾ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕಿ ವರ್ತಿಕಾ ಶುಕ್ಲಾ ಅವರು ತಿಳಿಸಿದ್ದಾರೆ. ನವದೆಹಲಿಯಲ್ಲಿ ಆಯೋಜಿಸಲಾಗಿದ್ದ ಉದ್ಯಮ ತಜ್ಞರ ಜಂಟಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಇತ್ತೀಚಿನ ಪಶ್ಚಿಮ ಏಷ್ಯಾದ ಬಿಕ್ಕಟ್ಟಿನ ಸಮಯದಲ್ಲಿ ದೇಶದ ಇಂಧನ ಭದ್ರತೆಗೆ ಎಥನಾಲ್ ಮಿಶ್ರಣವು ಪ್ರಮುಖ ರಕ್ಷಣಾ ಕವಚವಾಗಿ ಕಾರ್ಯನಿರ್ವಹಿಸಿದೆ ಎಂದು ವ್ಯಾಖ್ಯಾನಿಸಿದ್ದಾರೆ.

ದೇಶದಾದ್ಯಂತ ಗ್ರಾಹಕರಿಗೆ ಲಭ್ಯವಿರುವ ಒಟ್ಟು ಗ್ಯಾಸೋಲಿನ್‌ನಲ್ಲಿ ಶೇಕಡಾ ೨೦ ರಷ್ಟು ಎಥನಾಲ್ ಮಿಶ್ರಣ ಮಾಡುವ ಮೂಲಕ, ಭಾರತವು ಕಚ್ಚಾ ತೈಲದ ಆಮದನ್ನು ಯಶಸ್ವಿಯಾಗಿ ಕಡಿತಗೊಳಿಸಿದೆ. ಇದು ಜಾಗತಿಕ ಬಿಕ್ಕಟ್ಟಿನ ಸಂದರ್ಭದಲ್ಲೂ ಭಾರತದ ಇಂಧನ ವಲಯದ ಮೇಲಾಗುವ ದುಷ್ಪರಿಣಾಮಗಳನ್ನು ತಗ್ಗಿಸಲು

ನೆರವಾಗಿದೆ ಎಂದು ಅವರು ವಿವರಿಸಿದರು. ಜಾಗತಿಕವಾಗಿ ಎಥನಾಲ್ ಬಳಕೆಯ ಕುರಿತು ಮಾತನಾಡಿದ ವರ್ತಿಕಾ ಶುಕ್ಲಾ ಅವರು, ಭಾರತ ಮಾತ್ರವಲ್ಲದೆ ಕೆನಡಾ, ಅಮೆರಿಕ, ಬ್ರೆಜಿಲ್, ಪರಾಗ್ವೆ ಮತ್ತು ಜರ್ಮನಿ ಸೇರಿದಂತೆ ವಿಶ್ವದ ಹಲವು ಪ್ರಮುಖ ದೇಶಗಳು ಕಳೆದ ಹಲವು ವರ್ಷಗಳಿಂದ ವಿವಿಧ ಪ್ರಮಾಣದಲ್ಲಿ ಎಥನಾಲ್ ಅನ್ನು ಇಂಧನದಲ್ಲಿ ಯಶಸ್ವಿಯಾಗಿ ಮಿಶ್ರಣ ಮಾಡಿ ಬಳಸುತ್ತಿವೆ ಎಂದು ಮಾಹಿತಿ ನೀಡಿದರು.

**<>><><*><><<>**

ಕಳೆದ ಫೆಬ್ರುವರಿ ೨೮ ರಂದು ವೈಮಾನಿಕ ದಾಳಿಯಲ್ಲಿ ಹತರಾಗಿದ್ದ ಇರಾನ್‌ನ ಮಾಜಿ ಸರ್ವೋಚ್ಚ ನಾಯಕ ಅಯತೊಲ್ಲಾ ಸೈಯದ್ ಅಲಿ ಖಮೇನಿ ಅವರ ಆರು ದಿನಗಳ ಸರ್ಕಾರಿ ಅಂತ್ಯಸಂಸ್ಕಾರದ ವಿಧಿವಿಧಾನಗಳು ಇಂದು ಟೆಹ್ರಾನ್‌ನಲ್ಲಿ ಲಕ್ಷಾಂತರ ಜನರ ಸಮ್ಮುಖದಲ್ಲಿ ಆರಂಭಗೊಂಡಿವೆ. ಟೆಹ್ರಾನ್‌ನ ಗ್ರಾಂಡ್ ಮೊಸಲ್ಲಾದಲ್ಲಿ ನಡೆದ ಶ್ರದ್ಧಾಂಜಲಿ ಸಮಾರಂಭದಲ್ಲಿ ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯನ್ ಸೇರಿದಂತೆ ಹಿರಿಯ ರಾಜಕೀಯ ನಾಯಕರು ಮತ್ತು ಮಿಲಿಟರಿ ಕಮಾಂಡರ್‌ಗಳು ದಿವಂಗತ ನಾಯಕನಿಗೆ ಅಂತಿಮ ನಮನ ಸಲ್ಲಿಸಿದರು. ಈ ಮೆರವಣಿಗೆಯು ಮುಂದುವರಿದು ಇದೇ ೯ ರಂದು ಪವಿತ್ರ ನಗರವಾದ ಮಶಾದ್‌ನಲ್ಲಿ ದಫನ ಪ್ರಕ್ರಿಯೆಯೊಂದಿಗೆ ಮುಕ್ತಾಯಗೊಳ್ಳಲಿದ್ದು, ಇರಾನ್‌ನಲ್ಲಿ ೪೦ ದಿನಗಳ ಸಾರ್ವಜನಿಕ ಶೋಕಾಚರಣೆ ಘೋಷಿಸಲಾಗಿದೆ. ಭಾರತ ಸರ್ಕಾರದ ಪರವಾಗಿ ಬಿಹಾರದ ರಾಜ್ಯಪಾಲರಾದ ಲೆಫ್ಟಿನೆಂಟ್ ಜನರಲ್ ಸೈಯದ್ ಅತಾ ಹಸ್ನೈನ್ ಮತ್ತು ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ಪಬಿತ್ರಾ ಮಾರ್ಗರಿಟಾ ಅವರು ಈ ಸಮಾರಂಭದಲ್ಲಿ ಪಾಲ್ಗೊಂಡು ದೇಶದ ಪರವಾಗಿ ಅಂತಿಮ ಗೌರವ ಹಾಗೂ ಸಂತಾಪವನ್ನು ಸಲ್ಲಿಸಿದರು.

**<>><><*><><<>**

ಭಾರತ ಮತ್ತು ಇಂಗ್ಲೆಂಡ್ ನಡುವಿನ ಐದು ಪಂದ್ಯಗಳ ಅಂತಾರಾಷ್ಟ್ರೀಯ ಟಿ-೨೦ ಕ್ರಿಕೆಟ್ ಸರಣಿಯ ೨ನೇ ಪಂದ್ಯ ಇಂದು ಇಂಗ್ಲೆಂಡ್‌ನ ಮ್ಯಾಂಚೆಸ್ಟರ್‌ನಲ್ಲಿ ನಡೆಯುತ್ತಿದೆ. ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡುತ್ತಿರುವ ಭಾರತ ಇತ್ತೀಚಿನ ವರದಿಯಂತೆ ೫.೨ ಓವರ್‌ಗಳಲ್ಲಿ ೧ ವಿಕೆಟ್ ನಷ್ಟಕ್ಕೆ ೫೬ ರನ್ ಮಾಡಿ ಆಡುತ್ತಿದೆ. ಭಾರತೀಯ ಕ್ರಿಕೆಟ್ ಇತಿಹಾಸದಲ್ಲಿ ಇಂದು ಮತ್ತೊಂದು ದಾಖಲೆ ಸೃಷ್ಟಿಯಾಗಿದ್ದು, ಕೇವಲ ೧೫ ವರ್ಷ ೯೯ ದಿನಗಳ ಪ್ರಾಯದ ಯುವ ಬ್ಯಾಟರ್ ವೈಭವ್ ಸೂರ್ಯವಂಶಿ ಭಾರತೀಯ ಪುರುಷರ ಕ್ರಿಕೆಟ್ ತಂಡದ ಪರ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದಾರೆ.

**<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<>><><ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ><><<>**